<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .</u>

SC. No.165-2022

ದೋ.ಸಾ. 17
ಫ್ರಾ.ಸಾ. 10
ಪ್ರ.ವ.ಬೊ.ದಿನಾಂಕ. 31-10-2025

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ಡಾ.ಬಿ.ಎ.ಸೀತಾರಾಮ್ |
| ತಂದೆ / ಗಂಡನ ಹೆಸರು | - | ಬಿ.ಅಜ್ಜಪ್ಪ |
| ವಯಸ್ಸು | - | 61 |
| ಉದ್ಯೋಗ | - | ನಿವೃತ್ತ ಹಿರಿಯ ತಜ್ಞರು, ಸಿಜೆ ಆಸ್ಪತ್ರೆ, ದಾವಣಗೆರೆ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ದಿಃ 01-01-2015 ರಿಂದ 31-07-2024 ರವರೆಗೆ ನಾನು ಸಿಜೆ ಆಸ್ಪತ್ರೆಯಲ್ಲಿ ಹಿರಿಯ ತಜ್ಞನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 16-10-2020 ರಂದು ಮೊಹಮ್ಮದ್ ಇಸ್ಮಾಯಿಲ್ ಎಂಬ 23 ವರ್ಷ ವಯಸ್ಸಿನ ಪುರುಷ ವ್ಯಕ್ತಿಯು ಹಲ್ಲೆಯ ಇತಿಹಾಸದಲ್ಲಿ ನಮ್ಮ ಆಸ್ಪತ್ರೆಗೆ ಚಿಕಿತ್ಸೆಗಾಗಿ ಬಂದಿದ್ದು, ಅವರನ್ನು ಮದ್ಯಾಹ್ನ 2-20 ಗಂಟೆ ಸಮಯದಲ್ಲಿ ಪರಿಶೀಲನೆ ಮಾಡಿದಾಗ ಅವರ ದೇಹದ ಮೇಲೆ ಈ ಕೆಳಕಂಡ ಗಾಯಗಳು ಕಂಡುಬಂದಿರುತ್ತವೆ.

1. ಅವರ ಬಲಬದಿಯ ಬೆನ್ನಿನ ಮೇಲೆ ಅಂದರೆ vertabral column around middle area ದ ಬಳಿ ಸುಮಾರು 3X2X1 ಸೆಂಮೀ ಗಾತ್ರದ ರಕ್ತ ಸ್ರಾವ ಇರುವಂತಹ ಚುಚ್ಚಿದ ಗಾಯ ಕಂಡುಬಂದಿರುತ್ತದೆ.

2. ಅವರ ಎಡಬದಿಯ ಬೆನ್ನಿನ ಮೇಲೆ ಅಂದರೆ vertabral column around middle area ದ ಬಳಿ ಸುಮಾರು 1X1X1 ಸೆಂಮೀ ಗಾತ್ರದ ಚುಚ್ಚಿದ ಗಾಯ ಕಂಡುಬಂದಿರುತ್ತದೆ. ಅದು ಅಷ್ಟು ಆಳ ಗಾಯ ಆಗಿರುವುದಿಲ್ಲ.

3. ಅವರ ಎಡಮೊಣಕೈಯ ಮೇಲೆ ಒಂದು ಹರಿದ ಗಾಯ ಕಂಡುಬಂದಿದ್ದು, ಅದು 6X2 ಸೆಂಮೀ ಗಾತ್ರದ ಗಾಯ ಕಂಡುಬಂದಿದ್ದು, ಅದು ಮಾಂಸ ಖಂಡ ತೋರ್ಪಡಿಸುವ ರೀತಿಯ ಆಳ ಗಾಯ ಕಂಡುಬಂದಿರುತ್ತದೆ.

ನಂತರ ಸದರಿ ಗಾಯಾಳುವನ್ನು ನಮ್ಮ ಆಸ್ಪತ್ರೆಯ ಸರ್ಜರಿ ಡಿಪಾರ್ಟ್ ಮೆಂಟ್ ಗೆ ಶಿಫಾರಸು ಮಾಡಿರುತ್ತೇನೆ. ತದನಂತರ ಗಾಯಾಳು ನಮ್ಮ ಆಸ್ಪತ್ರೆಯಿಂದ ದಾವಣಗೆರೆಯ ಎಸ್ ಎಸ್ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದುಕೊಂಡಿರುತ್ತಾರೆ. ನಂತರ ಸದರಿ ಆಸ್ಪತ್ರೆಯ ಪೀಡ್ ಬ್ಯಾಕನ್ನು ನಾವು ಪಡೆದುಕೊಂಡಿದ್ದು, ಅದರ ಆಧಾರದ ಮೇಲಿಂದ ಸದರಿ 1 ರಿಂದ 3 ನೇ ಗಾಯಗಳು ಸಾದಾ ಸ್ವರೂಪದ ಗಾಯಗಳು ಎಂದು ಕಂಡುಬಂದಿದ್ದು, ನಂತರ ತನಿಖಾಧಿಕಾರಿಯು ಸದರಿ ಗಾಯಾಳುವಿನ ಗಾಯದ ಪ್ರಮಾಣ ಪತ್ರವನ್ನು ಕೋರಿಕೊಂಡಿದ್ದು, ನಾನು ನಮ್ಮ ಆಸ್ಪತ್ರೆಯ ದಾಖಲೆಗಳನ್ನು ಪರಿಶೀಲಿಸಿ ಈಗ ನೋಡುತ್ತಿರುವ ಗಾಯಾಳುವಿನ ಗಾಯದ ಪ್ರಮಾಣ ಪತ್ರ ವನ್ನು ನೀಡಿರುತ್ತೇನೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿ.ಪಿ.23 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.23(ಎ) ಎಂದು ಗುರುತಿಸಲಾಯಿತು. ಅಲ್ಲದೇ ಸಾಕ್ಷಿಯು ಎಸ್ ಎಸ್ ಆಸ್ಪತ್ರೆಯಿಂದ ಪೀಡ್ ಬ್ಯಾಕ್ ವರದಿಯನ್ನು ಕೂಡ ಗುರುತಿಸಿದ್ದು, ಅದನ್ನು ನಿ.ಪಿ.24 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.24(ಎ) ಎಂದು ಗುರುತಿಸಲಾಯಿತು.

ತದನಂತರ ತನಿಖಾಧಿಕಾರಿಯು ಒಂದು ಚಾಕುವನ್ನು ಹಾಜರುಪಡಿಸಿ ಅದರಿಂದ ಹಲ್ಲೆ ಮಾಡಿದರೆ ನಿ.ಪಿ.23 ರಲ್ಲಿ ತೋರಿಸಲಾದ ಗಾಯಗಳು ಆಗಬಹುದೇ ಎಂದು ಕೋರಿಕೊಂಡಿದ್ದು, ನಾನು ಸದರಿ ಚಾಕುವನ್ನು ಪರಿಶೀಲಿಸಿ ಅದರ ಉದ್ದ ಅಗಲ ಅಳತೆಯನ್ನು ನಮೂದಿಸಿ ಅದರ ಪೋಟೋವನ್ನು ಕೂಡ ತೆಗೆದುಕೊಂಡು ಸದರಿ ನಿ.ಪಿ.23 ರಲ್ಲಿ ತೋರಿಸಲಾದಂತಹ ಗಾಯಗಳು ಈ ಚಾಕುವಿನಿಂದ ಹಲ್ಲೆ ಮಾಡಿದರೆ ಆಗಬಹುದು ಎಂದು ನನ್ನ ಅಭಿಪ್ರಾಯ ನೀಡಿರುತ್ತೇನೆ. ಸದರಿ ಅಭಿಪ್ರಾಯವನ್ನು ನಿ.ಪಿ.25 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.25(ಎ) ಎಂದು ಗುರುತಿಸಲಾಯಿತು. ಸದರಿ ಚಾಕುವಿನ ಪೋಟೋವನ್ನು ನಾನು ನಿ.ಪಿ.25 ರಲ್ಲಿ ಗುರುತಿಸಿರುತ್ತೇನೆ. ಅಲ್ಲದೇ ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು.ಮಾ.5 ನ್ನು ನೋಡಿ ಗುರುತಿಸಿರುವುದಲ್ಲದೇ, ಮು.ಮಾ.6 ರ ಮೇಲೆ ಇರುವ ಆಸ್ಪತ್ರೆಯ ಸೀಲು ಹಾಗೂ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ಮು.ಮಾ.6(ಎ) ಎಂದು ಗುರುತಿಸಲಾಯಿತು. ನಾನು ಸದರಿ ಚಾಕುವನ್ನು ಪರಿಶೀಲಿಸಿದ ಬಳಿಕ ಪುನಃ ಅದನ್ನು ಸೀಲು ಮಾಡಿ ತನಿಖಾಧಿಕಾರಿಗೆ ಹಿಂದಿರುಗಿಸಿರುತ್ತೇನೆ. ಅಲ್ಲದೇ ಗಾಯಾಳು ಆಸ್ಪತ್ರೆಗೆ ಬಂದಾಗನ ಾನು ಆಸ್ಪತ್ರೆಯ ಹೊರಠಾಣಾ ಪೋಲೀಸರಿಗೆ ಎಂ ಎಲ್ ಸಿ ವರದಿಯನ್ನು ಕೂಡ ನೀಡಿರುತ್ತೇನೆ. ಸಾಕ್ಷಿಯು ಸದರಿ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿ.ಪಿ.26 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.26(ಎ) ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ಸದರಿ ದಿನ ಗಾಯಾಳುವನ್ನು ಜಯಶ್ರೀ ಎನ್ನುವ ಮಹಿಳೆಯು ಕರೆದುಕೊಂಡು ಆಸ್ಪತ್ರೆಗೆ ಬಂದಿರುತ್ತಾಳೆ. ನಿ.ಪಿ.23 ರಲ್ಲಿ ಆಕೆಯ ಹೆಸರನ್ನು ನಾನು ನಮೂದಿಸಿಲ್ಲ ಎಂದರೆ ಸರಿ. ಆದರೆ ಆಕೆಯ ಹೆಸರನ್ನು ಹಾಗೂ ಆಕೆಯ ಮೊಬೈಲ್ ನಂಬರನ್ನು ನಮ್ಮ ಆಸ್ಪತ್ರೆಯ ವರದಿಯಲ್ಲಿ ನಮೂದಿಸಿದ್ದು, ಅದನ್ನು ನಾನು ಈ ದಿನ ನ್ಯಾಯಾಲಯಕ್ಕೆ ತಂದಿರುತ್ತೇನೆ. ನಾನು ಸದರಿ ದಿನ ಗಾಯಾಳುವಿನ ಬಟ್ಟೆಗೆ ರಕ್ತ ತಾಗಿತ್ತೋ ಇಲ್ಲವೋ ನಾನು ಆತನ ಶರ್ಟನ್ನು ಗಮನಿಸಿದ್ದು ಇರುವುದಿಲ್ಲ. ಸಹಜವಾಗಿ ಒಂದು ಚಾಕುವಿನಿಂದ ಇಬ್ಬರು ವ್ಯಕ್ತಿಗಳ ಮೇಲೆ ಹಲ್ಲೆ ಮಾಡಿ ಚುಚ್ಚಿದಾಗ ರಕ್ತ ಗಾಯ ಉಂಟಾದಾಗ ಸಹಜವಾಗಿ ಸದರಿ ಇಬ್ಬರು ಗಾಯಾಳುವಿನ ರಕ್ತ ಚಾಕುವಿಗೆ ತಾಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಸಹಜವಾಗಿ ಇಬ್ಬರು ವ್ಯಕ್ತಿಗಳು ಜಗಳವಾಡುತ್ತಿರುವಾಗ ಓರ್ವನ ಕೈಯಲ್ಲಿ ಚಾಕು ಇದ್ದು, ಅವರಿಬ್ಬರು ಅವರಲ್ಲಿಯೇ ಕುಸ್ತಿ ಆಡುತ್ತ ಕೆಳಗಡೆ ಬಿದ್ದಾಗ ಅವರಲ್ಲಿ ಇಬ್ಬರಿಗೂ ಕೂಡ ಚಾಕು ಚುಚ್ಚಿ ಗಾಯವಾಗುವಂತಹ ಸಾಧ್ಯತೆ ಇರುತ್ತದೆ ಎಂದರೆ ಸರಿ.

ಪೋಲೀಸರು ಮು.ಮಾ.5 ನ್ನು ತಂದು ನನ್ನ ಹತ್ತಿರ ಅಭಿಪ್ರಾಯ ಕೋರಿದ್ದು, ಆಗ ನಾನು ನಿ.ಪಿ.25 ರಂತೆ ಅಭಿಪ್ರಾಯ ನೀಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿ.ಪಿ.23 ರಲ್ಲಿ ಹಲ್ಲೆ ಮಾಡಿದವರ ಹೆಸರನ್ನು ನಾನು ನಮೂದಿಸಿಲ್ಲ ಎಂದರೆ ಸರಿ. ಆದರೆ ನಮ್ಮ ಆಸ್ಪತ್ರೆಯ ದಾಖಲೆಯಲ್ಲಿ ಗಾಯಾಳುವಿಗೆ ಗೊತ್ತಿದ್ದ ವ್ಯಕ್ತಿಗಳು ಹಲ್ಲೆ ಮಾಡಿದ್ದಾರೆ ಎಂದು ಆತ ಹೇಳಿದ್ದನ್ನು ಬರೆಯಲಾಗಿದೆ ಎಂದು ನುಡಿದಿರುತ್ತಾರೆ. ನಾನು ಪೋಲೀಸರ ಕೋರಿಕೆಯ ಮೇರೆಗೆ ನಿ.ಪಿ.23 ದಾಖಲೆಯನ್ನು ನೀಡಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.10.31 11:47:33 +0530